(5)ಯೋಜನೆಯನ್ನು ಕಾರ್ಯಗತ ಮಾಡುವಲ್ಲಿ ಯಾವುದನ್ನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿದೆಯೋ ಅಥವಾ ಯಾವುದರ ಬಗ್ಗೆ ಅಭಿವೃದ್ಧಿ ತೆರಿಗೆಯನ್ನು ವಸೂಲು ಮಾಡಲು ಪ್ರಾಧಿಕಾರವು ಉದ್ದೇಶಿಸಿದೆಯೋ ಅಂಥ ಯಾವುದೇ ಕಟ್ಟಡದ ಅಥವಾ ಭೂಮಿಯ ಮೇಲೆ ಸ್ವತ್ತು ತೆರಿಗೆಯನ್ನು ಅಥವಾ ಭೂ ಕಂದಾಯವನ್ನು ಸಂದಾಯ ಮಾಡಲು ಪ್ರಥಮತಃ ಹೊಣೆಗಾರನಾಗಿರುವ ಯಾವ ವ್ಯಕ್ತಿಯ ಹೆಸರು ಸ್ಥಳೀಯ ಪ್ರಾಧಿಕಾರದ ಕರನಿರ್ಧಾರಣ ಪಟ್ಟಿಯಲ್ಲಿ ಅಥವಾ ಭೂ ಕಂದಾಯದ ರಿಜಿಸ್ಟರಿನಲ್ಲಿ ಕಂಡು ಬರುತ್ತದೆಯೋ ಆ ಪ್ರತಿಯೊಬ್ಬ ವ್ಯಕ್ತಿಗೆ ಅಂಥ ಅಧಿಸೂಚನೆಯು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿತವಾದ ದಿನಾಂಕದ ನಿಕಟ ತರುವಾಯದ ಮೂವತ್ತು ದಿನಗಳೊಳಗೆ ಪ್ರಾಧಿಕಾರವು ನೋಟೀಸನ್ನು ಕೊಡತಕ್ಕುದು ಮತ್ತು ಆ ಕಟ್ಟಡವನ್ನು ಅಥವಾ ಭೂಮಿಯನ್ನು ಏಕೆ ಸ್ವಾಧೀನ ಪಡಿಸಿಕೊಳ್ಳಬಾರದೆಂಬ ಬಗ್ಗೆ, ಮತ್ತು ಅಭಿವೃದ್ಧಿ ತೆರಿಗೆಯನ್ನು ಏಕೆ ವಸೂಲು ಮಾಡಕೂಡದೆಂಬ ಬಗ್ಗೆ ಈ ನೋಟೀಸು ತಲುಪಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಕಾರಣ ತೋರಿಸುವಂತೆ ಅಂಥ ವ್ಯಕ್ತಿಯನ್ನು ಅಗತ್ಯಪಡಿಸತಕ್ಕುದು.

(6) ಅಧ್ಯಕ್ಷರು ಅಥವಾ ಅವನ ಆದೇಶದ ಮೇರೆಗೆ ಯಾರಾದರೂ ನೋಟೀಸಿಗೆ ಸಹಿ ಮಾಡತಕ್ಕುದು, ಮತ್ತು ಅದನ್ನು

(ಕ) ಅವನಿಗೆ ಖುದ್ದಾಗಿ ಕೊಡುವ ಮೂಲಕ ಅಥವಾ ಅಂಥ ವ್ಯಕ್ತಿಯು ಗೈರುಹಾಜರಾಗಿದ್ದರೆ, ಅಥವಾ ಸಿಕ್ಕದಿದ್ದರೆ, ಅವನ ಏಜೆಂಟನಿಗೆ, ಅಥವಾ ಯಾವ ಏಜೆಂಟನೂ ಸಿಕ್ಕದಿದ್ದರೆ ಅಥವಾ ಆ ಭೂಮಿಯ ಅಥವಾ ಕಟ್ಟಡದ ಮೇಲೆ ಇಡುವುದರ ಮೂಲಕ ಅಥವಾ;

(ಖ) ಅಂಥ ವ್ಯಕ್ತಿಯು ಮಾಮೂಲಾಗಿ ವಾಸಿಸುತ್ತಿದ್ದ ಅಥವಾ ವ್ಯವಹಾರ ನಡೆಸುತ್ತಿದ್ದ ಅಥವಾ ವಾಸುತ್ತಿದ್ದನೆಂದು ಅಥವಾ ವ್ಯವಹಾರ ನಡೆಸುತ್ತಿದ್ದನೆಂದು ಕೊನೆಯದಾಗಿ ತಿಳಿದು ಬಂದ ಸ್ಥಳದಲ್ಲಿ ಅದನ್ನು ಇಡುವ ಮೂಲಕ; ಅಥವಾ

(ಗ) ಅಂಥ ವ್ಯಕ್ತಿಯು ಮಾಮೂಲಾಗಿ ವಾಸಿಸುತ್ತಿದ್ದ ಅಥವಾ ವ್ಯವಹಾರ ನಡೆಸುತ್ತಿದ್ದ ಅಥವಾ ವಾಸಿಸುತ್ತಿದ್ದನೆಂದು ಅಥವಾ ವ್ಯವಹರಿಸುತ್ತಿದ್ದನೆಂದು ಕೊನೆಯದಾಗಿ ತಿಳಿದುಬಂದ ಸ್ಥಳದ ವಿಳಾಸಕ್ಕೆ ನೋಂದಾಯಿತ ಅಂಚೆಯ ಮೂಲಕ ಜಾರಿಮಾಡತಕ್ಕುದು.

** ** ** **

(ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ವಿಧೇಯಕ, 1987,1981ರ ಕರ್ನಾಟಕ ಅಧಿನಿಯಮ 34ರ ಉದ್ಧೃತ ಭಾಗ)

** ** ** **

17. ಯೋಜನೆಯನ್ನು ಪೂರ್ಣಗೊಳಿಸುವುದಕ್ಕೆ ಕಾರ್ಯವಿಧಾನ - (1) ಒಂದು ಅಭಿವೃದ್ಧಿ ಸ್ಕೀಮನ್ನು ಸಿದ್ಧಪಡಿಸಿದಾಗ, ಪ್ರಾಧಿಕಾರವು, ಸ್ಕೀಮನ್ನು ರೂಪಿಸಲಾಗಿದೆಯೆಂಬ ಅಂಶದ ಹೇಳಿಕೆಯನ್ನು, ಅದರಲ್ಲಿ ಒಳಗೊಂಡಿರುವ ಪ್ರದೇಶದ ಪರಿಮಿತಿಗಳು ಮತ್ತು ಯಾವ ಸ್ಥಳದಲ್ಲಿ ಎಂಬ ಬಗೆಗಿನ ಸ್ಕೀಮಿನ ವಿವರಗಳು, ಅದರಲ್ಲಿ ಒಳಗೊಂಡ ಕ್ಷೇತ್ರದ ನಕ್ಷೆ ಅರ್ಜನೆ ಮಾಡಲು ಉದ್ದೇಶಿಸಲಾದ ಭೂಮಿಯನ್ನು ನಿರ್ದಿಷ್ಟಪಡಿಸುವ ಮತ್ತು ಪುರೋಭಿವೃದ್ಧಿ ತೆರಿಗೆಯನ್ನು ವಿಧಿಸಬಹುದಾದ ಭೂಮಿಯ ಕುರಿತು ಹೇಳಿಕೆ ನೀಡಿ ಎಲ್ಲ ಸಮುಚಿತ ಅವಧಿಗಳಲ್ಲಿ ನೋಡಬಹುದಾದ ಸ್ಥಳವನ್ನು ಹೆಸರಿಸುವಂಥ ಒಂದು ಅಧಿಸೂಚನೆಯನ್ನು ಸಿದ್ಧಪಡಿಸತಕ್ಕುದು.

(2) ಸದರಿ ಅಧಿಸೂಚನೆಯ ಒಂದು ಪ್ರತಿಯನ್ನು ಸ್ಥಳೀಯ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು. ಅದು, ಅದನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸ್ಥಳೀಯ ಪ್ರಾಧಿಕಾರವು ಸ್ಕೀಮಿನ ಬಗ್ಗೆ ಮಾಡಲು ತಾನು ಉಚಿತವೆಂದು ಭಾವಿಸುವ ಯಾವುದೇ ಮನವಿ ಪತ್ರವನ್ನು ಇದರಲ್ಲಿ ಇನ್ನು ಮುಂದೆ ಉಪಬಂಧಿಸಿರುವಂತೆ ಸರ್ಕಾರಕ್ಕೆ ರವಾನಿಸುವುದಕ್ಕಾಗಿ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(3) ಪ್ರಾಧಿಕಾರವು, ಸದರಿ ಅಧಿಸೂಚನೆಯ ಪ್ರತಿಯನ್ನು ಪ್ರದೇಶದಲ್ಲಿ ವ್ಯಾಪಕ ಪ್ರಸಾರವಿರುವ ಸ್ಥಳೀಯ ವೃತ್ತಪತ್ರಿಕೆಗಳ ಎರಡು ನಿರಂತರ ಸಂಚಿಕೆಗಳಲ್ಲಿ ಪ್ರಕಟವಾಗುವಂತೆ ಮತ್ತು ತನ್ನ ಕಛೇರಿ, ಡಿಪ್ಯೂಟಿ ಕಮೀಷನರ ಕಛೇರಿ, ಸ್ಥಳೀಯ ಪ್ರಾಧಿಕಾರದ ಕಛೇರಿ, ಮತ್ತು ಪ್ರಾಧಿಕಾರವು ಅವಶ್ಯವೆಂದು ಪರಿಗಣಿಸಬಹುದಾದ ಅಂಥ ಇತರ ಸ್ಥಳಗಳಲ್ಲಿಯ ಯಾವುದಾದರೂ ಎದ್ದು ಕಾಣುವ ಭಾಗದಲ್ಲಿ ಅಂಟಿಸುವಂತೆ ಮಾಡತಕ್ಕದ್ದು.

(4) (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಸ್ಥಳೀಯ ಪ್ರಾಧಿಕಾರವು ಯಾವುದೇ ಮನವಿ ಪತ್ರವನ್ನು ಸ್ವೀಕರಿಸದಿದ್ದರೆ, ಯೋಜನೆಗೆ ಸ್ಥಳೀಯ ಪ್ರಾಧಿಕಾರವು ಸಹಮತಿ ನೀಡಿದೆಯೆಂದು ಭಾವಿಸತಕ್ಕದ್ದು.

(5) ಸ್ಥಳೀಯ ವೃತ್ತ ಪತ್ರಿಕೆಗಳಲ್ಲಿ ಅಂಥ ಅಧಿಸೂಚನೆಯು ಪ್ರಕಟವಾದ ದಿನಾಂಕದ ತರುವಾಯದ ಮೂವತ್ತು ದಿನಗಳ ಅವಧಿಯಲ್ಲಿ ಪ್ರಾಧಿಕಾರವು ಸ್ಕೀಮನ್ನು ಕಾರ್ಯಗತಗೊಳಿಸಲು ಅರ್ಜಿ ಸಲ್ಲಿಸಬೇಕೆಂದು ಪ್ರಸ್ತಾವಿಸಿರುವ ಅಥವಾ ಪ್ರಾಧಿಕಾರವು ಪುರೋಭಿವೃದ್ಧಿ ತೆರಿಗೆಯನ್ನು ವಸೂಲು ಮಾಡಲು ಪ್ರಸ್ತಾವಿಸಿರುವ ಯಾವುದೇ ಕಟ್ಟಡ ಅಥವಾ ಭೂಮಿಯ ಮೇಲೆ ಆಸ್ತಿ ತೆರಿಗೆ ಅಥವಾ ಭೂ ಕಂದಾಯ ನಿರ್ಧರಣೆಯನ್ನು ಸಂದಾಯ ಮಾಡಲು ಪ್ರಾಥಮಿಕವಾಗಿ ಬದ್ಧನಾಗಿರುವುದಕ್ಕಾಗಿ ಸ್ಥಳೀಯ ಪ್ರಾಧಿಕಾರದ ನಿರ್ಧರಣಾ ಪಟ್ಟಿಯಲ್ಲಿ ಅಥವಾ ಭೂ ಕಂದಾಯದ ರಿಜಿಸ್ಟರಿನಲ್ಲಿ ಹೆಸರಿರುವ ಪ್ರತಿಯೊಬ್ಬ ವ್ಯಕ್ತಿಗೂ ನೋಟೀಸನ್ನು ಕಳುಹಿಸಿ, ಅಂಥ ಕಟ್ಟಡ ಅಥವಾ ಭೂಮಿಯ ಅರ್ಜನೆ ಮತ್ತು ಪುರೋಭಿವೃದ್ಧಿ ತೆರಿಗೆ ವಸೂಲಿಯನ್ನು ಏಕೆ ಮಾಡಬಾರದು ಎಂಬುದಕ್ಕೆ, ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕಾರಣವನ್ನು ತೋರಿಸಲೂ ಅಂಥ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

(6) ಕಮೀಷನರಿಂದ ಸಹಿ ಆದ ಅಥವಾ ಆದೇಶಾನುಸಾರ ಸಹಿ ಮಾಡಲಾದ ನೋಟೀಸನ್ನು-

(ಎ) ಸಮಕ್ಷಮ ರವಾನೆ ಮೂಲಕ ಅಥವಾ ಅಂಥ ವ್ಯಕ್ತಿಯು ಗೈರು ಹಾಜರಿದ್ದರೆ ಅಥವಾ ಕಂಡುಬರದಿದ್ದರೆ ಅವನ ಏಜಂಟಿಗೆ ಅಥವಾ ಅಂಥ ಏಜಂಟ್ ಇಲ್ಲದಿದ್ದರೆ ಭೂಮಿ ಅಥವಾ ಕಟ್ಟಡದ ಮೇಲೆ ಅದನ್ನು ಇಡುವ ಮೂಲಕ, ಅಥವಾ

(ಬಿ) ಅಂಥ ವ್ಯಕ್ತಿಯು ಸಾಮಾನ್ಯವಾಗಿ ಅಥವಾ ಅವನು ಕಡೆಯದಾಗಿ ವಾಸಿಸುತ್ತಿದ್ದನೆಂದು ತಿಳಿದು ಬರುವ ವಾಸದ ಅಥವಾ ವ್ಯವಹಾರದ ಸ್ಥಳದಲ್ಲಿ ಅದನ್ನು ಇಡುವ ಮೂಲಕ, ಅಥವಾ

(ಸಿ) ಅಂಥ ವ್ಯಕ್ತಿಯು ಸಾಮಾನ್ಯವಾಗಿ ಅಥವಾ ಅವನು ಕಡೆಯದಾಗಿ ವಾಸಿಸುತ್ತಿದ್ದನೆಂದು ತಿಳಿದು ಬರುವ ವಾಸ ಅಥವಾ ವ್ಯವಹಾರದ ಸ್ಥಳದ ವಿಳಾಸಕ್ಕೆ ನೋಂದಾಯಿತ ಅಂಚೆಯ ಮೂಲಕ

- ಜಾರಿಗೊಳಿಸತಕ್ಕದ್ದು.

** ** ** **